Bridge across Hebbahalla

*Q.—88. Sri H. D. DEVE GOWDA (Holenarasipur).—

Will the Minister for Public Works be pleased :—

(*a*) whether any representation has been received for the sanction of bridges across Hebbahalla uear (*i*) Kachenahalli and (ii) across Hebbahalla near Noranakki in Dandiganahalli Hobli, Channarayapatna Taluk, Hassan District ;

(*b*) whether the estimates are prepared and if so, the estimated cost for the above two works ;

(*c*) whether Government would sanction the estimates of the above two in the year 1967-68 ?

A.—Sri VEERENDRA PATIL (Minister for Public Works).—

(*a*) Yes.

(*b*) No.

(*c*) This will be considered subject to the availability of funds.

ಶ್ರೀ ಎಚ್. ಡಿ. ದೇವೇಗೌಡ.—ಇದಕ್ಕೆ ಎಸ್ಟಿಮೇಟ್ ತಯಾರಾಗಿಲ್ಲವೆಂದು ಹೇಳಿದ್ದೀರಿ ತಮ್ಮಿಂದ ಆರ್ಡರ್ ಬಂದು ಒಂದು ವರ್ಷವಾದರೂ ಇನ್ನೂ ತಯಾರಾಗದಿರಲು ಕಾರಣವೇನು ?

ಶ್ರೀ ವೀರೇಂದ್ರ ಪಾಟೀಲ್.—ಎಸ್ಟಿಮೇಟ್ ತಯಾರು ಮಾಡುತ್ತಿದ್ದಾರೆ. ರಫ್ ಆಗಿ ಹೇಳ ಬಹುದು. ಒಂದು 90 ಸಾವಿರ, ಒಂದು 40 ಸಾವಿರ. ನಮ್ಮ ಹತ್ತಿರ ದುಡ್ಡು ಇಲ್ಲ ಆ ಕಾರಣ ನಿಧಾನವಾಗುತ್ತಿದೆ.

ಶ್ರೀ ಎಚ್. ಸಿದ್ಧವೀರಪ್ಪ.—ದುಡ್ಡು ಇಲ್ಲವೆಂದು ಹೇಳುವ ಒಂದು ಗ್ರಾಮಫೋನ್ ರೆಕಾರ್ಡು ಮಾಡಿಸಿ, ಸದಸ್ಯರು ಕೇಳಿದಾಗಲೆಲ್ಲಾ ಅದನ್ನು ಹಾಕಬಿಡಿ ; ಅಲ್ಲಿಗೆ ಸರಿಹೋಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.—ಈಗ ಮಾನ್ಯ ಮಂತ್ರಿಗಳು ಒಂದಕ್ಕೆ 90 ಸಾವಿರ ರೂಪಾಯಿ ಗಳು, ಮತ್ತೊಂದಕ್ಕೆ 40 ಸಾವಿರ ರೂಪಾಯಿಗಳಾಗುತ್ತದೆಂದು ಹೇಳಿದರು. ಕೊನೆಯ ಪಕ್ಷ ಈ ಎರಡು ಕೆಲಸಗಳನ್ನಾದರೂ ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಅದೇ ಪ್ರದೇಶದಲ್ಲಿ ಸುಮಾರು 12,13,14 ಲಕ್ಷ ರೂಪಾಯಿಗಳ ದೊಡ್ಡ ದೊಡ್ಡ ಸೇತುವೆಗಳನ್ನು ತೆಗೆದುಕೊಂಡಿದ್ದೇವೆ. ಹೊಸದಾಗಿ ಈ ತರಹದ ಕೆಲಸಗಳನ್ನು ತೆಗೆದುಕೊಳ್ಳಬೇಕಾದರೆ ದುಡ್ಡು ನಮ್ಮಲ್ಲಿ ಇಲ್ಲವೆನ್ನುವುದು ಎಲ್ಲಾ ಸದಸ್ಯರಿಗೂ ಗೊತ್ತಿದೆ. ಅದನ್ನು ಪದೇ ಪದೇ ಹೇಳಬೇಕಾಗಿಲ್ಲ. ಹೊಸ ಕೆಲಸಗಳನ್ನು ತೆಗೆದುಕೊಳ್ಳುವಾಗ ಸಾಧ್ಯವಾದರೆ ಈ ಸೇತುವೆಗಳ ಕೆಲಸವನ್ನು ಪರಿಶೀಲಿಸುತ್ತೇವೆ.

Ranibennur-Byadagi Road

*Q.—338. Sri M. G. BANAKAR (Byadagi).—

Will the Minister for Public Works be pleased to state :—

(*a*) whether it is not a fact that Ranibennur-Byadagi road is an important road connecting Ranibennur and Byadagi Taluks ;

(SRI M. G. BANAKAR)

(*b*) whether it is not a fact that the said road also connects Byadagi-Rattihalli road *via* Ranibennur, Virekuppa, Sarvanda, Ukkunda, Belakeri, Joisarahalli, Bisialli and Thimmenahalli ;

(*c*) if so, whether they would consider taking over this road under the Public Works Department ?

A.—Sri VEERENDRA PATIL (Minister for Public Works).—

(*a*) No.

(*b*) Yes.

(*c*) Will be considered at the appropriate time.

ಶ್ರೀ ಎಂ. ಜಿ. ಬಣಕಾರ್.—ನಾನು ಕೇಳಿರುವ ಪ್ರಶ್ನೆಗೆ ಉತ್ತರವಾಗಿ ನಿಜವಲ್ಲವೆಂದು ಹೇಳಿದ್ದಾರೆ, ಅದು ಯಾವ ಅರ್ಥದಲ್ಲಿ ?

ಶ್ರೀ ವೀರೇಂದ್ರ ಪಾಟೀಲ್.—ರಾಣೇಬೆನ್ನೂರು–ಬ್ಯಾಡಗಿ ರಸ್ತೆಯು ರಾಣೇಬೆನ್ನೂರು ಮತ್ತು ಬ್ಯಾಡಗಿ ತಾಲ್ಲೂಕುಗಳನ್ನು ಸೇರಿಸುವ ಮುಖ್ಯ ರಸ್ತೆಯಾಗಿರುವುದು ನಿಜವಲ್ಲವೆ ಎಂದು ತಾವು ಕೇಳಿದ್ದೀರಿ. ಇದಕ್ಕಿಂತ ಮುಖ್ಯವಾದ ರಸ್ತೆಗಳು ಬೇರೆ ಇವೆ.

ಶ್ರೀ ಎಂ. ಜಿ. ಬಣಕಾರ್.—ಆ ಮುಖ್ಯವಾದ ರಸ್ತೆಗಳು ಯಾವುವು ಎಂಬುದನ್ನು ಹೇಳಿ.

ಶ್ರೀ ವೀರೇಂದ್ರ ಪಾಟೀಲ್.—ಯಾವುದು ಮುಖ್ಯ ರಸ್ತೆ ಎನ್ನುವುದಕ್ಕೆ ಬೇರೆ ಪ್ರಶ್ನೆ ಹಾಕಿದರೆ ಒಳ್ಳೆಯದು.

ಶ್ರೀ ಎಂ. ಜಿ. ಬಣಕಾರ್.—ಇದು ಸಹ ಒಂದು ಮುಖ್ಯರಸ್ತೆಯಲ್ಲವೆ?

ಶ್ರೀ ವೀರೇಂದ್ರ ಪಾಟೀಲ್.—ನಿಮ್ಮ ದೃಷ್ಟಿಯಲ್ಲಿ ಮುಖ್ಯ ರಸ್ತೆಯಾಗಿರಬಹುದು.

ಅಧ್ಯಕ್ಷರು.—ಅದನ್ನು ಒಂದು ಮುಖ್ಯವಾದ ರಸ್ತೆಯನ್ನಾಗಿ ಮಾಡಿ ಎಂದು ಹೇಳುತ್ತಾರೆ.

ಶ್ರೀ ಎಂ. ಜಿ. ಬಣಕಾರ್.—ಈ ರಸ್ತೆಯು ರಾಣೆಬೆನ್ನೂರು, ವೀರೆಕುಪ್ಪ, ಸರ್ವಂದ, ಉಕ್ಕುಂದ ಬೆಳಕೇರಿ,ಜೋಯಿಸರಹರಳಳ್ಳಿ, ಬಿಸಲಳ್ಳಿ ಮತ್ತು ತಿಮ್ಮೇನಹಳ್ಳಿಗಳ ಮಾರ್ಗವಾಗಿ ಬ್ಯಾಡಗಿ, ರಟ್ಟಿಹಳ್ಳಿಯನ್ನು ಸೇರಲು 9 ಮೈಲುಗಳಾಗುತ್ತವೆ. ಇದರಿಂದ ಸುಮಾರು 12–13 ಹಳ್ಳಿಯ ಜನರಿಗೆ ಅನುಕೂಲವಾಗುತ್ತದೆ. ಇಲ್ಲದಿದ್ದರೆ ಹಲಗೇರಿ ಮೂಲಕ ಸುತ್ತಿಕೊಂಡು ಹೋಗಬೇಕು. ಇದರಿಂದ ಮತ್ತೆ 5 ಮೈಲು ಜಾಸ್ತಿಯಾಗುತ್ತದೆ. ಆದ್ದರಿಂದ ಈ ರಸ್ತೆಯನ್ನು ಲೋಕೋಪಯೋಗಿ ಇಲಾಖೆಯವರು ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು.

ಅಧ್ಯಕ್ಷರು.—ಮುಖ್ಯ ರಸ್ತೆಯೆಂದು ಹೇಳುತ್ತಾರೆ, ಪರಿಶೀಲನೆ ಮಾಡಿ.

Sri VEERENDRA PATIL.—Very good, Sir.

ಶ್ರೀ ಎಂ. ಎಸ್. ಕೃಷ್ಣನ್.—ಇಲ್ಲಿ ಮೂರನೆಯ ಪ್ರಶ್ನೆಗೆ ಉತ್ತರವಾಗಿ ಸೂಕ್ತ ಸಮಯದಲ್ಲಿ ಇದನ್ನು ಪರಿಶೀಲಿಸಲಾಗುವುದು ಎಂದು ಹೇಳಿದ್ದೀರಿ, ಅಂದರೆ ಈ ಸರ್ಕಾರ ಇರುವಾಗಲೇ ಪರಿಶೀಲಿಸುತ್ತೀರೋ ಅಥವಾ ಹೊಸ ಸರ್ಕಾರ ಬಂದಮೇಲೋ, ಇಲ್ಲವೇ ದುಡ್ಡು ಒದಗಿದಾಗಲೋ ಎಂಬುದನ್ನು ತಿಳಿಸಬೇಕು.

ಶ್ರೀ ವೀರೇಂದ್ರ ಪಾಟೀಲ್.—ಇದು ರೂರಲ್ ಕಮ್ಯೂನಿಕೇಷನ್ ರೋಡ್. ಜನರಿಗೆ ಕೆಲಸ ಸಿಗಲಿ ಎಂದು ಪರಿಹಾರ ಕಾಮಗಾರಿಯನ್ನು ಮಾಡಿಸುತ್ತಿದ್ದೇವೆ. ಅನೇಕ ಸದಸ್ಯರು ಅನೇಕ ರಸ್ತೆಗಳನ್ನು ಲೊಕೋಪಯೋಗಿ ಇಲಾಖೆಯವರು ವಹಿಸಿಕೊಳ್ಳಬೇಕೆಂದು ಹೇಳಿದ್ದಾರೆ. ಒಬ್ಬೊಬ್ಬರು ಹೇಳಿದಾಗಲೂ ಒಂದೊಂದು ಗೌರ್ನಮೆಂಟ್ ಆರ್ಡರ್ ಮಾಡುವುದಕ್ಕಾಗುವುದಿಲ್ಲ. ಯಾವ ಯಾವ ರಸ್ತೆಗಳನ್ನು ಲೋಕೋಪಯೋಗಿ ಇಲಾಖೆಗೆ ಸೇರಿಸಿಕೊಳ್ಳಬೇಕು ಎನ್ನುವ ಬಗ್ಗೆ ಒಂದು ಪಟ್ಟಿಯನ್ನು ತಯಾರುಮಾಡುತ್ತಿದ್ದೇವೆ. ಆ ಪಟ್ಟಿ ತಯಾರಾಗುವ ಕಾಲಕ್ಕೆ ಈ ರಸ್ತೆಯ ಬಗ್ಗೆ ಪರಿಶೀಲಿಸಲಾಗುತ್ತದೆ.